For more job news visit : www.kpscvaani.com

Ph.No.:22096662,22096650
E-mail:admnkfcsc123@yhoo.com

ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ
ನಂ.16/I, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು-560 052
Karnataka Food & Civil Supplies Corporation Ltd.
(Government of Karnataka Undertaking)

ಸಂಖ್ಯೆ:ಕಆನಾಸನಿನಿ/ಆಡಳಿತ/ನೇ.ನೇ/746/2025-26/ 2381. ದಿನಾಂಕ:20.11.2025

ಅಧಿಸೂಚನೆ

ವಿಷಯ: ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಜು ನಿಗಮ ನಿಯಮಿತದಲ್ಲಿ ಕಿರಿಯ ಸಹಾಯಕರ 1:3 ಹುದ್ದೆಯ ದಾಖಲಾತಿ ಪರಿಶೀಲನೆಗೆ ದಿನಾಂಕ ಹಾಗೂ ಸ್ಥಳ ನಿಗದಿಪಡಿಸಿರುವ ಬಗ್ಗೆ.

ಉಲ್ಲೇಖ: 1. ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್15/2022-23(ಕೆಕೆ) ದಿನಾಂಕ.23.06.2023.
2. ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್15/2022-23 (ಆರ್‌ಪಿಸಿ) ದಿನಾಂಕ.23.06.20
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ದಿನಾಂಕ.20.06.2024 ರಂದು ಪ್ರಕಟಿಸಲಾದ ಹುದ್ದೆವಾರು ಅರ್ಹತಾ ಪಟ್ಟಿ.
4. ಸಂಖ್ಯೆ: ಕಆನಾಸನಿನಿ/ಆಡಳಿತ/ನೇ.ನೇ/746/2021-22 ದಿನಾಂಕ.05.11.2024.

****

ಉಲ್ಲೇಖಿತ ಅಧಿಸೂಚನೆಗಳಿಗೆ ಅನುಗುಣವಾಗಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದಲ್ಲಿ 263 ಕಿರಿಯ ಸಹಾಯಕರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಅಕ್ಟೋಬರ್-2023 ಮತ್ತು ನವೆಂಬರ್-2023ರ ಮಾಹೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸಲಾಗಿರುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿದ ತರುವಾಯ, ತಾತ್ಕಾಲಿಕ ಸರಿ ಉತ್ತರಗಳನ್ನು (ಕೀ ಉತ್ತರಗಳು) ದಿನಾಂಕ.04.12.2023ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರಕಟಿಸಿ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿ, ಆಕ್ಷೇಪಿತ ಕೀ ಉತ್ತರಗಳನ್ನು ವಿಷಯ ತಜ್ಞರ ಸಮಿತಿಯ ಮೂಲಕ ಪರಿಶೀಲಿಸಿ ಅಂತಿಮ ಕೀ ಉತ್ತರಗಳನ್ನು ದಿನಾಂಕ.15.02.2024 ರಂದು ಪ್ರಕಟಿಸಲಾಗಿರುತ್ತದೆ.

ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಅಂತಿಮ ಅಂಕ ಪಟ್ಟಿಯನ್ನು ಅಭ್ಯರ್ಥಿಗಳ/ ಹುದ್ದೆವಾರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್ ಸೈಟ್‌ನಲ್ಲಿ ದಿನಾಂಕ.20.06.2024ರಂದು ಪ್ರಕಟಿಸಲಾಗಿರುತ್ತದೆ. ಮುಂದುವರೆದು, ದಾಖಲಾತಿಗಳ ಪರಿಶೀಲನೆಗಾಗಿ ಸೂಚಿತ ರಿಕ್ತ ಸ್ಥಾನಗಳ ಆಧಾರದ ಮೇಲೆ ಹುದ್ದೆವಾರು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ.05.11.2024ರಂದು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ವೆಬ್ ಸೈಟ್ https://kfcsc.karnataka.gov.in ರಲ್ಲಿ 1:3 ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಕೆಲವು ಆಕ್ಷೇಪಣೆಗಳು ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅರ್ಹತಾ ಪಟ್ಟಿಯನ್ನು ಕೂಲಂಕೂಷವಾಗಿ ಪರಿಶೀಲಿಸಿ, ಈ ಕೆಳಕಂಡ 1:3 ಅರ್ಹತಾ ಪಟ್ಟಿಯ ಅಭ್ಯರ್ಥಿಗಳನ್ನು ಈ ಕೆಳಕಂಡ ದಿನಾಂಕಗಳಂದು ನಿಗಧಿತ ಸಮಯಕ್ಕೆ ನಿಗಧಿಸಿರುವ ಸ್ಥಳದಲ್ಲಿ ಮೂಲ ದಾಖಲಾತಿಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ.

ದಿನಾಂಕ ಹಾಗೂ ಸಮಯದ ವಿವರ:

ಕ್ರಮ. ಸಂ.	ದಿನಾಂಕ	ಸಮಯ
1.	ದಿನಾಂಕ.01.12.2025	ಬೆಳಿಗ್ಗೆ-10:30 ಗಂಟೆಗೆ
		ಮಧ್ಯಾಹ್ನ- 02:30 ಗಂಟೆಗೆ
2.	ದಿನಾಂಕ.02.12.2025	ಬೆಳಿಗ್ಗೆ-10:30 ಗಂಟೆಗೆ
		ಮಧ್ಯಾಹ್ನ- 02:30 ಗಂಟೆಗೆ
3.	ದಿನಾಂಕ.03.12.2025	ಬೆಳಿಗ್ಗೆ-10:30 ಗಂಟೆಗೆ
		ಮಧ್ಯಾಹ್ನ- 02:30 ಗಂಟೆಗೆ

20/11/25

For more job news visit : www.kpscvaani.com

ದಾಖಲಾತಿ ಪರಿಶೀಲನಾ ಸ್ಥಳದ ವಿಳಾಸ:

ನಂ.32 ಡಾ. ಬಾಬು ಜಗಜೀವನರಾಂ
ಲಿಡ್ಕರ್ ಭವನ ಸಭಾಂಗಣ,
ಡಾ. ಬಾಬು ಜಗಜೀವನರಾಂ ಚರ್ಮ
ಕೈಗಾರಿಕಾ ಅಭಿವೃದ್ಧಿ ನಿಗಮ
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ
ವಸಂತನಗರ, ಬೆಂಗಳೂರು-560052.

ಮೂಲ ದಾಖಲಾತಿ ಪರಿಶೀಲನೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸೂಚನೆಗಳು.

1. ಆನ್ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯ ಮುದ್ರಿತ ಪ್ರತಿಯ ಮೇಲೆ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಕಲರ್ ಭಾವಚಿತ್ರವನ್ನು ಅಂಟಿಸಿ ತರುವುದು.
2. ಕರ್ನಾಟಕ ರಾಜ್ಯದಿಂದ ಮನ್ನಣೆಯಾದ ವಿದ್ಯಾ ಸಂಸ್ಥೆಯಿಂದ ಪಡೆದ ಎಸ್ಎಸ್ಎಲ್ಸಿ (10ನೇ ತರಗತಿ) ಹಾಗೂ ಪಿಯುಸಿ (12ನೇ ತರಗತಿ) ಅಂಕಪಟ್ಟಿಯನ್ನು ಹಾಜರುಪಡಿಸುವುದು.
3. ಮಾಜಿ ಸೈನಿಕರಾಗಿದ್ದಲ್ಲಿ ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರ ಹಾಗೂ ಸೈನಿಕ ಮಂಡಳಿಯಿಂದ ಪಡೆದಿರುವ ಗುರುತಿನ ಚೀಟಿ.
4. ಗ್ರಾಮೀಣ ಮೀಸಲಾತಿ ಬಯಸಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವುದನ್ನು ಧೃಢೀಕರಿಸಿರುವ ಪ್ರಮಾಣ ಪತ್ರ (ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 96 ಸೇನೆನಿ 2005, ದಿನಾಂಕ.10.08.2005 ರನ್ವಯ). ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಬಯಸಿದ್ದಲ್ಲಿ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-01ರಲ್ಲಿ ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದ ಪ್ರಮಾಣ ಪತ್ರ.
5. ಕನ್ನಡ ಮಾಧ್ಯಮ ವ್ಯಾಸಂಗ ಮೀಸಲಾತಿ ಬಯಸಿದ್ದಲ್ಲಿ 01ನೇ ತರಗತಿಯಿಂದ 10ನೇ ತರಗತಿಯವರಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದ್ದಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರ.
6. ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಅರ್ಜಿ ಸಲ್ಲಿಸಿದ ದಿನಾಂಕದಂದು ನಮೂದಿಸಿದ RD ಸಂಖ್ಯೆ ಹೊಂದಿರುವ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸುವುದು.
7. ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 03 ಕಲರ್ ಫೋಟೋಗಳು.
8. ಈ ಮೇಲ್ಕಂಡ ಎಲ್ಲಾ ಮೂಲ ದಾಖಲಾತಿಗಳ 02 ಸೆಟ್ ಸ್ವಯಂ ದೃಢೀಕೃತ ನಕಲು ಪ್ರತಿಗಳನ್ನು ತರುವುದು.
9. ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗುವ ಯಾವುದೇ ಅಭ್ಯರ್ಥಿಗಳಿಗೆ TA & DA ನೀಡಲಾಗುವುದಿಲ್ಲ.
10. ದಾಖಲಾತಿಗಳ ಪರಿಶೀಲನೆ ಮತ್ತು ನಂತರದ ನೇಮಕಾತಿ ಪ್ರಕ್ರಿಯೆಯು ಕಾಲ ಕಾಲಕ್ಕೆ ನೇಮಕಾತಿಯ ನಿಭಂದನೆಗಳು ಸಂಬಂಧಿತ ಸರ್ಕಾರಿ ನಿಯಮಗಳು/ ಆದೇಶಗಳು/ ಅಧಿಸೂಚನೆಗಳು/ ಮಾನ್ಯ ನ್ಯಾಯಾಲಯಗಳ ಆದೇಶದ ಷರತ್ತಿಗೆ ಒಳಪಟ್ಟಿರುತ್ತದೆ.
11. ಪ್ರಾಧಿಕಾರವು ನಿಗದಿಪಡಿಸಿದ ಹುದ್ದೆವಾರು ವೇಳಾ ಪಟ್ಟಿಯಂತೆ ಅಭ್ಯರ್ಥಿಗಳು ನಿಗದಿತ ಸಮಯದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ವಿದ್ಯಾರ್ಹತೆ ಹಾಗೂ ಮೀಸಲಾತಿಗಳ ಅನುಸಾರ ಕಡ್ಡಾಯವಾಗಿ ಮೂಲ ದಾಖಲೆಗಳನ್ನು ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸುವುದು.
12. ಅರ್ಹತಾ ಪಟ್ಟಿಯಲ್ಲಿ ಹೆಸರಿಸಿದ ಮಾತ್ರಕ್ಕೆ ಅಭ್ಯರ್ಥಿಯು ನೇಮಕಾತಿಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಅಭ್ಯರ್ಥಿತ್ವವು ಮೂಲ ದಾಖಲೆಗಳ ಪರೀಶೀಲನೆ, ಅರ್ಹತಾ ಷರತ್ತುಗಳು ಮತ್ತು ಸರ್ಕಾರ/ ಸಕ್ಷಮ ಪ್ರಾಧಿಕಾರದಿಂದ ಕಾಲ ಕಾಲಕ್ಕೆ ಹೊರಡಿಸಲಾದ ನಿಯಮಗಳ ಷರತ್ತಿಗೆ ಒಳಪಟ್ಟಿರುತ್ತದೆ.
13. ನಿಗಮದಿಂದ ನಡೆಸಲಾಗುವ ಮೂಲ ದಾಖಲೆಗಳ ಪರೀಶೀಲನೆಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು, ಗೈರು ಹಾಜರಾದಲ್ಲಿ ಮತ್ತೊಮ್ಮೆ ಮೂಲ ದಾಖಲೆಗಳ ಪರಿಶೀಲನೆಗೆ ಕಾಲಾವಕಾಶ ನೀಡಲಾಗುವುದಿಲ್ಲ.

20/11/25

ವ್ಯವಸ್ಥಾಪಕ ನಿರ್ದೇಶಕರು